ಈ) ಬಿತ್ತನೆ ಧಾನ್ಯಗಳು ಸರಿಯಾಗಿ ಮೊಳಕೆ ಬಾರದಿರುವ ಬಗ್ಗೆ ದೂರುಗಳಿದ್ದು ಇವನ್ನು ಸರಿಪಡಿಸುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎನ್. ಚಿಕ್ಕೌಡ (ಕೃಷಿ ಸಚಿವರು) :

ಅ) ಈ ರೀತಿಯ ಯಾವ ಪ್ರಸ್ತಾವನೆಯು ರಾಜ್ಯ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಈ ರೀತಿಯ ಯಾವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಇ) ಹೌದು

ಈ) ಕಳಪೆ ಬಿತ್ತನೆ ಬೀಜಗಳ ಉಪಯೋಗದಿಂದ ಮೊಳಕೆ ಬಾರದಿರುವ ಬಗ್ಗೆ ದೂರುಗಳು ಬಂದಲ್ಲಿ,ಬೀಜ ಕಾಯಿದೆ 1966 ಹಾಗೂ ಬೀಜ ನಿಯಮಾವಳಿ 1968ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದಲ್ಲದೆ ಕಳಪೆ ಗುಣಮಟದ ಬಿತ್ತನೆ ಬೀಜಗಳನ್ನು ಮಾರಾಟವಾಗದಂತೆ ತಡೆಯುವ ಸಲುವಾಗಿ,ರೈತರಿಗೆ ಪ್ರಮಾಣಿತ ಮತ್ತು ಉತ್ತಮಗುಣಮಟ್ಟದ ಬೀಜವನ್ನು ಅಧಿಕೃತ ಮಾರಾಟಗಾರರಿಂದ ಪಡೆಯಲು ತಿಳುವಳಿಕೆ ನೀಡಲಾಗುತ್ತಿದೆ.

ಟಿ. ನರಸೀಪುರ ಕ್ಷೇತ್ರದ ಗ್ರಾಮೀಣಾ ಪ್ರದೇಶದ ಜನರಿಗೆ ಉಚಿತ ನಿವೇಶನ

2444 - ಶ್ರೀ ಎಂ. ಶ್ರೀನಿವಾಸಯ್ಯ, (ಟಿ.ನರಸೀಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಟಿ.ನರಸೀಪುರ ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರಹಿತರಿಗೆ ಉಚಿತ ನಿವೇಶನಗಳನ್ನು ಹಂಚಿ ಬಹಳ ವರ್ಷಗಳು ಆಗಿರುವುದರಿಂದ ಹಿಂದುಳಿದ ಹಾಗೂ ಪರಿಶಿಷ್ಟ ಜನಾಂಗದವರಿಗೆ ನಿವೇಶನಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಿಂದುಳಿದ ಹಾಗೂ ಪರಿಶಿಷ್ಟ ಜನಾಂಗದ ಬಡ ಜನತೆಗೆ ಉಚಿತ ನಿವೇಶನಗಳನ್ನು ಎಂದಿನಿಂದ ನೀಡಲಾಗುವುದು;

3) ಮಂಡಲ ಪಂಚಾಯಿತಿಗಳಲ್ಲಿ ಹಣದ ಕೊರತೆಯಿಂದ ಇದುವರೆಗೆ ನಿವೇಶನಗಳನ್ನು ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1. ನಿರ್ದಿಷ್ಟವಾಗಿ ಬಂದಿರುವುದಿಲ್ಲ.

2. 1972ರಿಂದಲೂ ನೀಡಲಾಗುತ್ತಿದೆ.

3. ಹೌದು,

ಹೊಸದಾಗಿ ತಾಲ್ಲೂಕು ಮಟದ ಸಮಿತಿಯನ್ನು ರಚಿಸಲಾಗಿದ್ದು,ಸದರಿ ಸಮಿತಿಯು ಮುಂದಿನ ಕ್ರಮ ತೆಗೆದುಕೊಳ್ಳುತ್ತದೆ.

ಬೀದರ್ ಜಿಲ್ಲೆಯಿಂದ ಹಾಲಿನ ಸರಬರಾಜು

2545 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ದಿನಕ್ಕೆ ಎಷ್ಟು ಲೀಟರ್ ಹಾಲನ್ನು ಸರಬರಾಜು ಮಾಡಲಾಗುತ್ತಿದೆ.